**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರವರ ಕಛೇರಿ(ಪ್ರ.ಉ.ಯೋ) ಕೆ.ಜಿ ರಸ್ತೆ, ಬೆಂಗಳೂರು-2.**

ಸಂಖ್ಯೆ. ಎಂ2. ಅದಾ.ಶಾ.ಪ.ರ.50/2005-06. ದಿನಾಂಕ: 13-02-2006.

<u>ಜ್ಞಾಪನಾ</u>

ವಿಷಯ: ತಾಯಂದಿರು ಸ್ವಯಂ ಆಗಿ ಮಕ್ಕಳಿಗೆ ಉಣಬಡಿಸುವುದರ ಪರ್ಯಾಯ ಮೇಲುಸ್ತುವಾರಿ ಮಾಡುವ ಬಗ್ಗೆ.

ಉಲ್ಲೇಖ: ಅರೆ ಸರ್ಕಾರಿ ಪತ್ರದ ಸಂಖ್ಯೆ.ಎಸ್.ಓ.ಎಫ್. 13-10/2005 ಇ.ಇ.5(ಎಂ.ಡಿ.ಎಂ) ದಿನಾಂಕ 21-12-2005 ರಂದು ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ ಭಾರತ ಸರ್ಕಾರ ರವರಿಂದ.

***

<u>ಪ್ರಸ್ತಾವನೆ:-</u>

ಭಾರತ ಸರ್ಕಾರದ ಸರ್ವೋಚ್ಚ ನ್ಯಾಯಾಲಯದ ತೀರ್ಪಿನನ್ವಯ ಪ್ರಾಥಮಿಕ ಸರ್ಕಾರಿ ಹಾಗೂ ಅನುದಾನಿತ ಶಾಲಾ ಮಕ್ಕಳಿಗೆ ಮಧ್ಯಾಹ್ನ ಉಪಹಾರ ಯೋಜನೆಯನ್ನು ಕೇಂದ್ರ ಸರ್ಕಾರದ ಸಹಭಾಗಿತ್ವದೊಡನೆ ನಮ್ಮ ಘನ ಸರ್ಕಾರವು ಯಶಸ್ವಿಯಾಗಿ ನಡೆಸುತ್ತಿದೆ. ಮಧ್ಯಾಹ್ನ ಉಪಹಾರ ಯೋಜನೆಯ ಅನುಷ್ಠಾನ ಹಾಗೂ ನಿರ್ವಹಣೆಯ ಬಗ್ಗೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಮೇಲ್ವಿಚಾರಣಾ ಸಮಿತಿಗಳು ಈಗಾಗಲೇ ರಚನೆಯಾಗಿ ಸಮಿತಿಗಳು ಕಾರ್ಯನಿರ್ವಹಿಸುತ್ತಿದೆ. ಇದರ ಜೊತೆಗೆ ಅಡುಗೆಯವರಿಗೆ ಶುಚಿತ್ವದ ಅರಿವು ಮೂಡಿಸಲು ತರಭೇತಿ ನೀಡಲಾಗಿದೆ. ಉಲ್ಲೇಖದ ಪತ್ರದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯವು ತಾಯಂದಿರುಗಳು ಸ್ವಯಂ ಆಗಿ ಮಕ್ಕಳಿಗೆ ಉಣಬಡಿಸುವುದರ ಮೇಲುಸ್ತುವಾರಿಯನ್ನು ಈ ಕಾರ್ಯಕ್ರಮದಲ್ಲಿ ತೊಡಗಿಸಿಕೊಳ್ಳುವುದರಿಂದ ಮಗುವು ಉತ್ತಮ ಗುಣಮಟ್ಟದ ಆಹಾರವನ್ನು ಪ್ರತಿನಿತ್ಯವು ತಪ್ಪದೆ ಪಡೆಯುತ್ತದೆಂಬುದರ ಬಗ್ಗೆ ಅಭಿಪ್ರಾಯಿಸಿದೆ. ಆದ್ದರಿಂದ ಮಾತೆಯರನ್ನು ಪ್ರೋತ್ಸಾಹಿಸಿ ಪ್ರತಿದಿನ ಮೇಲುಸ್ತುವಾರಿ ಮಾಡಲು ಅಧಿಕಾರ ನೀಡಲು ತೀರ್ಮಾನಿಸಿ ಬಿಸಿಊಟ ತಯಾರು ಮಾಡುವಾಗ ಅಥವಾ ಬಡಿಸುವಾಗ ಶಾಲೆಯಲ್ಲಿ ಹಾಜರಾಗಿದ್ದು ಈ ಪರ್ಯಾಯ ಮೇಲುಸ್ತುವಾರಿ ಮಾಡಲು ತಾಯಂದಿರುಗಳಿಗೆ ತಿಳಿಹೇಳಬೇಕಾಗಿದೆ. ಈಗಾಗಲೇ ಅಡುಗೆ ಕೇಂದ್ರಗಳನ್ನು ಮಕ್ಕಳ ದಾಖಲಾತಿಯನ್ವಯ ಎ,ಬಿ,ಸಿ. ಕೇಂದ್ರಗಳನ್ನಾಗಿ ವಿಂಗಡಣೆ ಮಾಡಲಾಗಿದೆ. ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ವಿದ್ಯಾರ್ಥಿಗಳ ದಾಖಲಾತಿಯನ್ವಯ ಒಬ್ಬ ಮಾತೆಗೆ ವರ್ಷಕ್ಕೆ 1 ಅಥವಾ 2 ಬಾರಿ ಈ ಅವಕಾಶ ಬರಬಹುದು ಈ ಅಂಶಗಳನ್ನು ಮನಗಂಡು ಭಾರತ ಸರ್ಕಾರದ ಸೂಚನೆಯನ್ವಯ ಈ ಕೆಳಕಂಡಂತೆ ಆದೇಶಿಸಿದೆ.

<u>ಆದೇಶ:-</u>

ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳು ಮಧ್ಯಾಹ್ನ ಉಪಹಾರ ಯೋಜನೆಯಿಂದ ಸಹ ಭೋಜನಾ ಮಾಡುತ್ತಿರುವುದರಿಂದ ಸಹ ಬಾಳ್ವೆ ಹಾಗೂ ಸೋದರತ್ವ ಭಾವನೆ ಮೂಡಿಸಿದಂತಾಗಿದೆ. ಇದರ ಜೊತೆಗೆ ತಾಯಿಯು ಹಾಜರಿದ್ದು ಊಟ ಬಡಿಸುವುದರಿಂದ ಮಕ್ಕಳಿಗೆ ಮನೆಯ ವಾತಾವರಣದಲ್ಲಿ ಊಟ ಮಾಡಿದಂತಾಗುತ್ತದೆ. ಆದ್ದರಿಂದ ಈ ಕೆಳಕಂಡ ನಿಬಂಧನೆಗಳನ್ವಯ ತಾಯಂದಿರು ಸ್ವಯಂ ಆಗಿ ಮಕ್ಕಳಿಗೆ ಉಣಬಡಿಸುವುದರ ಮೇಲುಸ್ತುವಾರಿ ಮಾಡಲು ಅವಕಾಶ ಕಲ್ಪಿಸಿದೆ.

ನಿಬಂಧನೆಗಳು

1. ವಿದ್ಯಾರ್ಥಿಗಳ ದಾಖಲಾತಿಯನ್ವಯ ಪೋಷಕರ ವಿಳಾಸವನ್ನು ಪಡೆದು ತಾಯಂದಿರ ಪಟ್ಟಿಯನ್ನು ತಯಾರಿಸುವುದು.
2. ತಾಯಂದಿರುಗಳಿಗೆ ಅರಿವು ಮೂಡಿಸಲು ತಕ್ಷಣವೇ ಶಾಲಾ ಮಟ್ಟದಲ್ಲಿ ಸಭೆ ಕರೆದು ಇದರ ಉದ್ದೇಶಗಳನ್ನು ತಿಳಿಹೇಳುವುದು.
3. ಪ್ರಾರಂಭಿಸಿರುವ ಅಡುಗೆ ಕೇಂದ್ರಗಳಿಗೆ ಮಾತೆಯರನ್ನು ಗುರ್ತಿಸಿ ಅವರಿಗೆ ವೇಳಾಪಟ್ಟಿ ನೀಡುವುದು.

| ಅಡುಗೆ ಕೇಂದ್ರ | ನಿಗಧಿ ಪಡಿಸಿದ ಮಾತೆಯರು. |
|---|---|
| ಎ1 | 1 |
| ಎ | 2 |
| ಬಿ | 3 |
| ಸಿ | 4 |

4. ಮಾತೆಯವರ ಮೇಲುಸ್ತುವಾರಿ ಸಮಿತಿ ವಹಿಯನ್ನು ಶಾಲಾ ಮಟ್ಟದಲ್ಲಿ ನಿರ್ವಹಿಸಿ ಹಾಜರಾದ ದಿನಾಂಕದಂದು ಸಹಿ ಪಡೆಯುವುದು.
5. ಸಮಿತಿ ರಚಿಸಿದ ಬಗ್ಗೆ ಸಹ ನಿರ್ದೇಶಕರು ( ಮಧ್ಯಾಹ್ನ ಉಪಹಾರ ಯೋಜನೆ) ರವರಿಗೆ ವರದಿ ಮಾಡುವುದು.

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ.

ಪ್ರತಿಯನ್ನು:-

1. ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್ ಇವರಿಗೆ ಸೂಕ್ತ ಕ್ರಮಕ್ಕಾಗಿ.
3. ಎಲ್ಲಾ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ
4. ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ

u/2-50